**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 10.06.2021.

**1] ಆಲಮೇಲ ಪೊಲೀಸ ಠಾಣೆ ಗುನ್ನೆ ನಂ: 67/2021 ಕಲಂ: 188, 269 ಐ.ಪಿ.ಸಿ. ಮತ್ತು 87 ಕೆ.ಪಿ. ಆಕ್ಟ್. ಹಾಗೂ ಕಲಂ: 5 (1) of Karnataka Epidemic Diseases Act-2020.**

ದಿನಾಂಕ: 09.06.2021 ರಂದು 16.50 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಪ್ರವೀಣ ತಂದೆ ರಾಮಚಂದ್ರ ರುಕುಂಪುರ ವಯಾ: 22 ವರ್ಷ, 2] ನಾನಾಸಾಹೇಬ ತಂದೆ ಗೊಲ್ಲಾಳಪ್ಪ ರುಕುಂಪುರ ವಯಾ: 24 ವರ್ಷ, 3] ಶಿವಪ್ಪ ತಂದೆ ರಾವುತಪ್ಪ ರುಕುಂಪುರ ವಯಾ: 25 ವರ್ಷ,4] ಅನೀಲ ತಂದೆ ಶಿವಯೋಗೆಪ್ಪ ರುಕುಂಪುರ ವಯಾ: 32 ವರ್ಷ, 5] ಪರಶುರಾಮ ತಾಯಿ ಭೀಮಬಾಯಿ ಗುಡಿಮನಿ ವಯಾ: 34 ವರ್ಷ, 6] ಲಕ್ಷ್ಮಣ ತಂದೆ ಮಾದೇವಪ್ಪ ಬಿರಾದಾರ ವಯಾ 40 ವರ್ಷ, 7] ಹಣಮಂತ ತಂದೆ ರಾವುತಪ್ಪ ರುಕುಂಪುರ ವಯಾ 23 ವರ್ಷ ಸಾ॥ ಎಲ್ಲರೂ ಹಿಕ್ಕಣಗುತ್ತಿ ತಾ: ಸಿಂದಗಿ, ಜಿ: ವಿಜಯ ಇದರಲ್ಲಿ ಆರೋಪಿತರು ಕೋರೋನಾ ಸಾಂಕ್ರಾಮಿಕ ರೋಗವು (ಕೋವಿಡ್-19) ವ್ಯಾಪಕವಾಗಿ ಹರಡುತಿದ್ದರಿಂದ ಸರಕಾರದ ಆದೇಶದನ್ವಯ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಸಾರ್ವಜನಿಕರಿಗೆ ಗುಂಪಾಗಿ ಕೂಡುವುದು, ಸೇರುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಗುಂಪಾಗಿ ಜನ ಸೇರದಂತೆ ಮುಂಜಾಗ್ರುತಾ ಕ್ರಮವಾಗಿ ಆದೇಶವನ್ನು ಜಾರಿ ಮಾಡಿದ್ದು, ಸದರ ಆರೋಪಿತರು ಮಾನ್ಯ ಸರಕಾರದ ಆದೇಶವನ್ನು ಉಲ್ಲಂಘಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಗುಂಪಾಗಿ ಕುಳಿತುಕೊಂಡು ಸರಕಾರ ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕರಿಗೆ ಸೊಂಕು ಹರಡುವ ಸಂಭವ ಇದೆ ಅಂತ ಗೊತ್ತಿದ್ದರೂ ಕೂಡಾ ತಮ್ಮ ತಮ್ಮ ಫಾಯಿದೆಗೊಸ್ಕರ ಹಿಕ್ಕಣಗುತ್ತಿ ಗ್ರಾಮದಲ್ಲಿರುವ ಮರಗಾಮಾಯಿ ಗುಡಿಯ ಮುಂದೆ ಇರುವ ಖುಲ್ಲಾ ಸಾರ್ವಜನಿಕ ಸ್ಥಳದಲ್ಲಿ ಗುಂಪಾಗಿ ಕುಳಿತು ಅಂದರ ಬಾಹರ ಅನ್ನುವ ಇಸ್ಪೇಟ ಜೂಜಾಟವನ್ನು ಆಡುತಿದ್ದಾಗ, ಒಟ್ಟು ಹಣ 3200/- ರೂ ಮತ್ತು 52 ಇಸ್ಪೆಟ ಎಲೆಗಳ ಸಮೇತ ಸಿಕ್ಕಿದ್ದೆ. ಈ ಬಗ್ಗೆ ಶ್ರೀ ಸುರೇಶ ಆರ್ ಗಡ್ಡಿ ಪಿಎಸ್ಐ ಆಲಮೇಲ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.06.2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಸಿಂದಗಿ ಪೊಲೀಸ ಠಾಣೆ ಗುನ್ನಾ. ನಂ: 160/2021 ಕಲಂ: 188, 269 ಐ.ಪಿ.ಸಿ ಮತ್ತು ಕಲಂ: 87 ಕೆಪಿ ಯ್ಯಾಕ್ಟ**

ದಿನಾಂಕ: 09.06.2021 ರಂದು ಸಾಯಂಕಾಲ 5.10 ಘಂಟೆ. ಸುಮಾರಿಗೆ ಇದರಲ್ಲಿ ಆರೋಪಿತರಾದ ]ಮಹಾಂತೇಶ ತಂ. ಬಸಣ್ಣ ಹತ್ತರಕಿ ಸಾ:ಸಿಂದಗಿ.2]ವಿಜಯಾನಂದ ತಂ. ಶಿವಶಂಕರಾವ ಪಾಟೀಲ ಸಾ:ಸಿಂದಗಿ.3] ರವಿ ತಂ. ಶಿವಪ್ಪ ಬಳೂರ ಸಾ:ಸಿಂದಗಿ.4] ಸಂಗಪ್ಪ ತಂ. ಶರಣಪ್ಪ ಕುಂಬಾರ, ಸಾ:ಸಿಂದಗಿ.5]ಶಿವಾನಂದ ತಂ. ಶಂಕರ ಬ್ಯಾಲಿಹಾಳ ಸಾ:ನಂದಗೇರಿ, ತಾ:ಸಿಂದಗಿ. ಈಗ ಸಧ್ಯ ಕರೋನಾ ಸಾಂಕ್ರಾಮಿಕ ರೋಗವು (ಕೋವಿಡ್-19) ವ್ಯಾಪಕವಾಗಿ ಹರಡುತಿದ್ದರಿಂದ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದನ್ವಯ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಜಿಲ್ಲೆಯಾದ್ಯಂತ ಸಾರ್ವಜನಿಕರು ಗುಂಪು, ಗುಂಪಾಗಿ ಕೂಡದಂತೆ, ಗುಂಪು ಸೇರದಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಮತ್ತು ಅಂಗಡಿ, ಹೊಟೇಲ, ದಾಬಾ ಬಂದ್ ಮಾಡಿ ಲಾಕ್‌ಡೌನ್ ಆದೇಶ ಮಾಡಿದ್ದರೂ ಸಹೀತ ಮೇಲೆ ನಮೂದ ಮಾಡಿದ ಆರೋಪಿತರು ಕನಾಟಕ ರಾಜ್ಯ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ದಿನಾಂಕ: 09.06.2021 ರಂದು ಸಾಯಂಕಾಲ 5.10 ಘಂಟೆಯ ಸುಮಾರಿಗೆ ಸಿಂದಗಿ ಪಟ್ಟಣದ ಶ್ರೀ, ಸಂಗಮೇಶ್ವರ ಗುಡಿಯ ಮುಂದಿನ ಕಟ್ಟೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಗುಂಪಾಗಿ ಕುಳಿತರೆ ಸಾಂಕ್ರಾಮಿಕ ರೋಗವು ಹರಡುವ ಸಂಭವ ಇದೆ ಅಂತಾ ಗೊತ್ತಿದ್ದು ತಿಳಿದು, ತಿಳಿದು ಗುಂಪಾಗಿ ಕುಳಿತು ತಮ್ಮ ತಮ್ಮ ಫಾಯಿದೆಗೊಸ್ಕರ ಹಣವನ್ನು ಪಣಕ್ಕೆ ಹಚ್ಚಿ ಇಸ್ಪೇಟ್ ಎಲೆಗಳ ಸಹಾಯದಿಂದ ಅಂದರ-ಬಾಹರ ಅನ್ನುವ ಇಸ್ಪೇಟ ಜೂಜಾಟ ಆಡುತಿದ್ದಾಗ ಸಲಕರಣೆಗಳ ಸಮೇತ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ:ಶ್ರೀ, ಎಸ್. ಎಚ್. ಹೊಸಮನಿ, ಪಿ.ಎಸ್.ಐ ಸಿಂದಗಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.06.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 86/2021 ಕಲಂ 188. 269, 271 ಐಪಿಸಿ**

ದಿನಾಂಕ: 09.06.2021 ರಂದು 12:00 ಗಂಟೆಯ ಸುಮಾರಿಗೆ ಸುಮಾರಿಗೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಬಸಯ್ಯ ತಂದೆ ಈರತಯ್ಯ ವಿಭೂತಿಮಠ, ವಯಾ-45 ವರ್ಷ, ಉದ್ಯೋಗ: ಹೊಟೇಲ ವ್ಯಾಪಾರ, ಜಾತಿ-ಹಿಂದೂ-ಜಂಗಮ ಸಾ॥ ಮನಗೂಳಿ ಹಾ.ವ:ಜಾಡರ ಓಣಿ, ಈತನು ವಿಜಯಪೂರ ಶಹರದ ಕೋಲಾರ ರೋಡಿಗೆ ಇರುವ ತನ್ನ ಕೋಲಾರ ಪಿಶ್ ಲ್ಯಾಂಡ ಹೊಟೇಲ ಪ್ರಾರಂಭಿಸಿ ಅನಾವಶ್ಯಕವಾಗಿ ಜನರಿಗೆ ಸೇರಿಸಿಕೊಂಡು ಊಟವನ್ನು ಪಾರ್ಸಲ್ ಕೊಡದೆ ಹೊಟೇಲದಲ್ಲಿಯೆ ಊಟಕ್ಕೆ ಕೊಟ್ಟು ವ್ಯಾಪಾರ ಮಾಡುತ್ತಿದ್ದಾಗ ಸಿಕ್ಕಿರುತ್ತಾನೆ. ಈ ಬಗ್ಗೆ [ಶ್ರೀ ರಫೀಕಅಹ್ಮದ ತಂದೆ ಮಹಿಬೂಬಸಾಬ ಬಳಗಾರ] ಕಿರಿಯ ಆರೋಗ್ಯ ನಿರೀಕ್ಷಕರು ಜಾತಿ-ಮುಸ್ಲಿಂ ಸಾ॥ ವಿಜಯಪುರ ಮಹಾನಗರ ಪಾಲಿಕೆ.ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.06.2021 ರಂದು ಜಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಜಲನಗರ ಪೊಲೀಸ ಠಾಣೆ ಗುನ್ನಾ. ನಂ: 33/2021 ಕಲಂ 188. 269, 271 ಐಪಿಸಿ**

ದಿನಾಂಕ 08.06.2021 ರಂದು ಮದ್ಯಾಹ್ನ 03–00 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ ಕಲ್ಲಪ್ಪ ತಂದೆ ಧನಪಾಲ ಮೈಸಾಳ ವಯಾ–21 ವರ್ಷ ಜಾತಿ–ಜೈನ್ ದಿಗಂಬರ ಉದ್ಯೋಗ–ವ್ಯಾಪಾರ ಸಾ–ಸಿದ್ದಾಪೂರ(ಕೆ) ಇದರಲ್ಲಿ ಆರೋಪಿತನು ಕರೋನಾ ವೈರಸ್/ಕೋವಿಡ್–19 ಸಾಂಕ್ರಾಮೀಕ ರೋಗ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮೀಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನೀಕರ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗೃತಾ ಕ್ರಮವಾಗಿ ಕರ್ನಾಟಕ ಸರಕಾರದ ನಿರ್ದೇಶನದ ಆದೇಶದಂತೆ ತನ್ನ ಹೊಟೇಲ ಅಂಗಡಿಯನ್ನು ತೆರೆಯಬಾರದು ಅಂತಾ ಕರ್ನಾಟಕ ಸರಕಾರದ ಆದೇಶವಿದ್ದರೂ ಸಹ ತನ್ನ ಹೊಟೇಲ ಅಂಗಡಿಯನ್ನು ತೆರೆದು ಸಾರ್ವಜನೀಕರಿಗೆ ಸೇರಿಸಿ ವ್ಯಾಪಾರ ಮಾಡಿ ಅಪಾಯಕಾರಿ ಸಾಂಕ್ರಾಮೀಕ ರೋಗ ಹರಡುವಿಕೆ ಬಗ್ಗೆ ನಿರ್ಲಕ್ಷ ವಹಿಸಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಪಾಲನೇ ಮಾಡದೇ ಆದೇಶ ಉಲ್ಲಂಘನೆ ಮಾಡಿದ್ದು ಕಂಡುಬರುತ್ತಿದೆ. ಈ ಬಗ್ಗೆ ಎ.ಎಮ್.ಮುಶಾಪುರಿ ಪಿ.ಎಸ್.ಐ(ಕಾ.ಸು) ತಿಕೋಟಾ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09–06–2021 ರಂದು ಜಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 104/2021 ಕಲಂ 302,201 ಐಪಿಸಿ**

ದಿನಾಂಕ; 08.06.2021 ರಂದು 22:00 ಗಂಟೆಯಿಂದ ದಿನಾಂಕ:09.06.2021 ರಂದು 5:00 ಗಂಟೆಯ ನಡುವಿನ ಅವದಿಯಲ್ಲಿ ಇದರಲ್ಲಿ ಯಾರೋ ಆರೋಪಿತರು ಹೆಸರು ವಿಳಾಸ ನಮೂದು ಇರುವದಿಲ್ಲಾ. ಸದರ ಮೃತ ಮಹಿಳೆ ಅಂದಾಜು 20–25 ವರ್ಷದವಳಿದ್ದು ದುಂಡಮುಖ ಗೋದಿ ಮೈಬಣ್ಣ 5 ಪೂಟ 1 ಇಂಚು ಎತ್ತರ ತಲೆಯಲ್ಲಿ 1.1/2 ಪೂಟ ಉದ್ದದ ಕಪ್ಪು ಕೂದಲುಗಳು ಇದ್ದು ಇವಳಿಗೆ ಯಾರೋ ಆರೋಪಿತರು ಯಾರೋ ಉದ್ಧೇಶಕ್ಕಾಗಿ ಎಲ್ಲಿಂದಲೋ ಕರೆದುಕೊಂಡು ಬಂದು ಅವಳ ಕುತ್ತಿಗೆಗೆ ಬಿಳಿ ಓಡನಿಯಿಂದ ಕಟ್ಟಿ ಉಸಿರುಗಟ್ಟಿಸಿ ಸಾಯಿಸಿ ಕೊಲೆ ಮಾಡಿ ಅವಳ ತಲೆಯನ್ನು ಪೂಲಿಗೆ ಜಜ್ಜಿ ಗಾಯಪಡಿಸಿ ಕೊಲೆ ಮಾಡಿ ಪುರಾವೆ ನಾಶ ಮಾಡುವ ಉದ್ದೇಶದಿಂದ ಶವವನ್ನು ಪೂಲಿನ ಒಳಗೆ ಮುಚ್ಚಿ ಇಟ್ಟು ಪರಾರಿಯಾಗಿ ಹೋಗಿದ್ದು ಅವರ ಮೇಲೆ ನನ್ನದು ಪಿರ್ಯಾದಿ ಇದ್ದು ಕಾನೂನು ಕ್ರಮ ಕೈಕೊಳ್ಳಲು ವಿನಂತಿ. ಅಂತಾ ನಮೂದು ಇರುತ್ತದೆ. ಈ ಬಗ್ಗೆ ಶಿವನಗೌಡ ತಂ/ ಸಂಗನಗೌಡ ಮಂಗ್ಯಾಳಸಾ॥ ಜಮ್ಮಲದಿನ್ನಿ ತಾ॥ ಮುದ್ದೇಬಿಹಾಳ. ರವರು ಪಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09–06–2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 57/2021 ಕಲಂ: ಮಹಿಳಾ ಕಾಣೆ**

ದಿನಾಂಕ : 07.06.2021 ರಂದು 23:00 ಗಂಟೆಯಿಂದ 08.06.2021 ರಂದು ಮುಂಜಾನೆ 07:00 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಕಾಣೆಯಾದ ಪಿರ್ಯಾದಿಯ ಮಗಳಾದ ರವೀನಾ ಗಂ/ ರಮೇಶ ಚವ್ಹಾಣ, ವಯಾ: 23 ವರ್ಷ, ಜಾತಿ: ಹಿಂದೂ ಲಂಬಾಣಿ, ಉದ್ಯೋಗ: ಮನೆಗೆಲಸ, ಇವರು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಮನೆ ಬಿಟ್ಟು ಹೋಗಿ ವಾಪಸ್ಸ ಮನೆಗೆ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾಗಿರುವ ರವೀನಾ ಇವರದು ಕೋಲು ಮುಖ, ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಎತ್ತರ : 5 ಪೂಟ್ 1 ಇಂಚು ಇದ್ದು, ಕನ್ನಡ, ಹಿಂದಿ, ಲಂಬಾಣಿ ಬಾಷೆ ಮಾತನಾಡುತ್ತಾಳೆ. ಹೋಗುವಾಗ ಕಪ್ಪು ಬಣ್ಣದ ನೈಟಿ ಧರಿಸಿಕೊಂಡು ಹೋಗಿರುತ್ತಾಳೆ. ಈ ಪ್ರಕಾರ ಚಹರೆ ಪಟ್ಟಿ ಇರುವ ನನ್ನ ಮಗಳನ್ನು ಇಲ್ಲಿಯವರೆಗೆ ಅಲ್ಲಿ ಇಲ್ಲಿ ಹುಡುಕಾಡಿ ಬಂದು ಪಿರ್ಯಾದಿ ಕೊಡಲು ತಡವಾಗಿರುತ್ತದೆ. ಕಾರಣ ನನ್ನ ಮಗಳಿಗೆ ತಪಾಸಣೆ ಮಾಡಿಕೊಡಬೇಕಾಗಿ ವಿನಂತಿ ಅಂತಾ ವಗೈರೆ ಪಿರ್ಯಾಧಿಯಲ್ಲಿ ನಮೂದ ಅದೆ. ಈ ಬಗ್ಗೆ ಸವಿತಾ ಗಂ/ ರಾಜು ರಜಪೂತ, ವಯಾ : 38 ವರ್ಷ ಜಾತಿ : ಹಿಂದೂ ಲಂಬಾಣಿ, ಉಧ್ಯೋಗ : ಮನೆಗೆಲಸ, ಸಾ॥ ಅಥಣಿ ರಸ್ತೆ ನಾಗರಬಾವಡಿ ತೋಟ ವಿಜಯಪುರ ರವರು ಪಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.06.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.